## ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 712/2023

**ಸಾಕ್ಷಿಯನ್ನು ದಿಃ 12.12.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ಲೋಲಾಕ್ಷಿ ಟಿ.ಎಸ್ | ಸಿಡಬ್ಲ್ಯೂ:17 | ಪಿಡಬ್ಲ್ಯೂ:6 |
| ಗಂಡನ ಹೆಸರು | ಶ್ರೀನಿವಾಸ್ ಯಾದವ್ | | |
| ವಯಸ್ಸು | 43 ವರ್ಷ | | |
| ಕೆಲಸ | ಪಿ.ಐ ಲಷ್ಕರ್ ಪೊಲೀಸ್ ಠಾಣೆ<br>ಮೈಸೂರು ಜಿಲ್ಲಾ ಕಛೇರಿ | | |
| ವಾಸಸ್ಥಳ | ಮೈಸೂರು. | | |

**ಮುಖ್ಯ ವಿಚಾರಣೆ: ಮಾನ್ಯ ಸಸಅ ರವರಿಂದ:**

ನಾನು ದಿಃ 09.08.2023 ರಿಂದ ದಿಃ 06.06.2025 ವರೆಗೆ ಬಿಳಿಕೆರೆ ಪೊಲೀಸ್ ಠಾಣೆಯಲ್ಲಿ ಪಿ.ಐ.ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 12.08.2023 ರಂದು ಚಾಸಾ-16 ರವರಿಂದ ಕೇಸಿನ ಕಡತವನ್ನು ಮುಂದಿನ ತನಿಖೆಗಾಗಿ ಪಡೆದುಕೊಂಡು ಪರಿಶೀಲಿಸಿರುತ್ತೇನೆ.

ಅದೇ ದಿನ ಚಾಸಾ-11 ರವರಿಂದ ಐಎಂವಿ ವರದಿ ಪಡೆದುಕೊಂಡಿರುತ್ತೇನೆ. ಸದರಿ ಐ ಎಂ ವಿ ವರದಿಯನ್ನು ಈಗಾಗಲೇ ನಿಪಿ-11 ಎಂದು ಆರೋಪಿತರ ಸಮ್ಮತಿ ಮೇರೆಗೆ ಗುರುತಿಸಲಾಗಿದೆ. ಅದೇ ದಿನ ಚಾಸಾ-12 ರವರಿಂದ ಪಿ ಎಂ ವರದಿಯನ್ನು ಪಡೆದುಕೊಂಡಿರುತ್ತೇನೆ. ಸದರಿ ದಾಖಲೆಯನ್ನು ಈಗಾಗಲೇ ನಿಪಿ-10 ಎಂದು ಆರೋಪಿತರ ಸಮ್ಮತಿ ಮೇರೆಗೆ ಗುರುತಿಸಲಾಗಿದೆ.

ದಿಃ 02.11.2023 ರಂದು ಚಾಸಾ-13 ರವರಿಂದ 65(ಬಿ) ಪ್ರಮಾಣ ಪತ್ರವನ್ನು ಪಡೆದಕೊಂಡಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ನಿಪಿ-17 ಎಂದು ಸಾಕ್ಷಿಯ ಸಹಿಯನ್ನು ನಿಪಿ-17(ಎ) ಎಂದು ಗುರುತಿಸಲಾಯಿತು.

ಅದೇ ದಿನ ಟಿವಿಎಸ್ ಮೋಟಾರ್ ಬೈಕ್‌ನ ಮಾಲೀಕರಾದ ಸಿದ್ದನಾಯ್ಕರವರಿಂದ ಬಾಂಡ್ ಪಡೆದು ಬೈಕನ್ನು ವಶಕ್ಕೆ ನೀಡಿರುತ್ತೇನೆ. ಸದರಿ ಬಾಂಡನ್ನು ನಿಪಿ-18 ಎಂದು ಸಾಕ್ಷಿಯನ್ನು ನಿಪಿ-18(ಎ) ಎಂದು ಗುರುತಿಸಲಾಯಿತು. ಟಿವಿಎಸ್ ಮೋಟಾರ್ ಬೈಕ್‌ನ ಪೋಟೋ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-7, 8 ಎಂದು ಗುರುತಿಸಲಾಗಿದೆ. ಈ ಹಂತದಲ್ಲಿ ತನಿಖೆ ಪೂರ್ಣಗೊಂಡಿದ್ದು ಆರೋಪಿತನ ವಿರುದ್ಧ ಅಂತಿಮ ವರದಿ ಸಲ್ಲಿಸಿರುತ್ತೇನೆ.

**<u>ಪಾಟೀಸವಾಲುಃ ಆರೋಪಿ ಪರ ಶ್ರೀ ಸಿ.ಎಸ್.ಎಂ ವಕೀಲರಿಂದಃ</u>**

ಮೃತನ ತಲೆಯ ಭಾಗಕ್ಕೆ ಪೆಟ್ಟು ಬಿದ್ದು ಮೃತಪಟ್ಟಿದ್ದಾನೆಂದು ಪಿ ಎಂ ವರದಿಯಲ್ಲಿ ನಮೂದು ಇರುತ್ತದೆ. ಮೃತನು ಅಪಘಾತ ಸಮಯದಲ್ಲಿ ಹೆಲ್ಮೇಟ್ ಧರಿಸಿದ್ದನೋ ಇಲ್ಲವೋ ಎಂಬ ಬಗ್ಗೆ ನಾನು ತನಿಖೆ ಮಾಡಿಲ್ಲ. ನಿಪಿ-7, 8 ರಲ್ಲಿ ಕಾಣುವ ಬೈಕಿನ ಹಿಂಭಾಗಕ್ಕೆ ಯಾವುದೇ ಡ್ಯಾಮೇಜ್ ಆಗಿಲ್ಲ ಎಂದರೆ ಸರಿಯಲ್ಲ. ನಿಪಿ-5 ರ ಪೋಟೋದಲ್ಲಿ ಕಾಣುವ ಅಶೋಕ ಲೈಲಾಂಡ್ ವಾಹನಕ್ಕೆ ಮುಂಭಾಗ ಯಾವುದೇ ಡ್ಯಾಮೇಜ್ ಅಗಿಲ್ಲ ಎಂದರೆ ಸರಿಯಲ್ಲ. ಸದರಿ ಪೋಟೋದಲ್ಲಿ ಯಾವುದೇ ಡ್ಯಾಮೇಜ್ ಆದ ಬಗ್ಗೆ ಕಾಣಿಸುವುದಿಲ್ಲ ಎಂದರೆ ಸರಿಯಲ್ಲ. ತನಿಖಾ ಕಾಲದಲ್ಲಿ ಮೃತನು ಮಧ್ಯ ಸೇವನೆ ಮಾಡಿ ಬೈಕ್ ಚಾಲನೆ ಮಾಡುತ್ತಿದ್ದ ಎಂದು ಕಂಡು ಬಂದಿದೆಯಾ ಎಂದರೆ ನಾನು ಆ ಬಗ್ಗೆ ತನಿಖೆ ಮಾಡಿಲ್ಲ, ಹಿಂದಿನ ತನಿಖಾಧಿಕಾರಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಅಪಘಾತ ಆರೋಪಿಯ ಅಜಾಗರೂಕತೆಯಿಂದ ಆಗಿಲ್ಲ ಮೃತನ ಅಜಾಗರೂಕತೆಯಿಂದ ಆಗಿದ್ದರೂ ಸುಳ್ಳು ಅಂತಿಮ ವರದಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತನ ಕುಟುಂಬಕ್ಕೆ ಪರಿಹಾರ ಸಿಗಲಿ ಎಂದು ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.